ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಡೆ ಈ ಯೋಜನೆಯಡಿಯಲ್ಲಿ ಕೆಲಸ ನಡೆಸಲಾಗಿದೆ ಹಾಗೂ ಖರ್ಚಾದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಸಚಿವರು).—

ಅ) ೮೨ ಕಡೆ ಕೆಲಸಗಳನ್ನು ಪ್ರಾರಂಭಿಸಿ ೪೯ ಕೆಲಸಗಳು ಮುಗಿದಿವೆ.

ಆ) ೮ ಕಾವಂಗಾರಿಗಳನ್ನು ತೆಗೆದುಕೊಳ್ಳಲಾಗಿದೆ, ಮತ್ತು ಜನವರಿ ೧೯೮೮ರ ಕೊನೆಯವರೆಗೆ ೨೫.೯೦ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಕೃಷ್ಣಾ ಘಟಪ್ರಭಾ ಜಲಾನಯನ ಪ್ರದೇಶದಲ್ಲಿ ಏತ ನೀರಾವರಿ ಯೋಜನೆಗಳು

೧೧೧೮. ಶ್ರೀ ಬಾಬುರೆಡ್ಡಿ ಏ. ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಸುಮಾರು ೬೦ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಾಗಿ ನೀರಾವರಿ ಸಚಿವರು ಹೇಳಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಈ ಯೋಜನೆಗಳನ್ನು ಕಾರ್ಯಗತ ಮಾಡಲು ರಾಷ್ಟ್ರೀಕೃತ ಬ್ಯಾಂಕುಗಳು ಮುಂದೆ ಬಂದಿವೆಯೇ ಹಾಗೂ ಆ ಬ್ಯಾಂಕುಗಳಾವುವು ?

ಇ) ಈ ವರ್ಷ ಕೃಷ್ಣಾ ಮತ್ತು ಘಟಪ್ರಭಾ ನದಿಗಳಿಗೆ ಎಷ್ಟು ಏತ ನೀರಾವರಿ ಯೋಜನೆಗಳನ್ನು ಸರ್ಕಾರದಿಂದ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಹೌದು. ಈ ಕೆಳಕಂಡ ಬ್ಯಾಂಕುಗಳು ಸಾಲ ನೀಡಲು ಮುಂದೆ ಬಂದಿವೆ.

೧) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ.

೨) ವಿಜಯಾ ಬ್ಯಾಂಕ್

೩) ಸಿಂಡಿಕೇಟ್ ಬ್ಯಾಂಕ್

೪) ಕೆನರಾ ಬ್ಯಾಂಕ್

೫) ಕಾರ್ಪೊರೇಷನ್ ಬ್ಯಾಂಕ್

೬) ಇಂಡಿಯನ್ ಓವರ್‌ಸೀಸ್ ಬ್ಯಾಂಕ್

೭) ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್

ಇ) ಕೃಷ್ಣಾ ನದಿಯಿಂದ ೭ ಮತ್ತು ಘಟಪ್ರಭಾ ನದಿಯಿಂದ ೨.

ಪಾಲಿಟೆಕ್ನಿಕ್ ಕಾಲೇಜುಗಳ ಸೌಲಭ್ಯಗಳ ಬಗ್ಗೆ

೧೧೦೯. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಾಗಿಲು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಸೌಲಭ್ಯಗಳ ಬಗ್ಗೆ ಸರ್ಕಾರ ನೇಮಿಸಿದ್ದ ಆಯೋಗದ ಶಿಫಾರಸ್ಸುಗಳೇನು ?

ಆ) ಇದರ ಬಗ್ಗೆ ಸರ್ಕಾರದ ಕ್ರಮಗಳೇನು ?